ಎಲ್.ಎ.ಸಿ ನಂಃ 553/2019
ಪಿ.ಡಬ್ಲೂ ನಂಃ 01

ದಿನಾಂಕಃ 09-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಲ್ ಟಿ ಟಿ ವಕೀಲರಿಂದ 2 ನೇ ಎದುರುದಾರ ಪರಃ**

ನನ್ನ ಪೂರ್ಣ ಹೆಸರು ಮಹಾಂತೇಶ ಗಂಗಪ್ಪಾ ಬೇವನೂರ. ನಾನು ಎಲ್ ಎ ಸಿ 554, 555, 5556, 557/2019 ರ ಪ್ರಕರಣಗಳಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಸದರಿಯವರು ನನಗೆ ಸಾಕ್ಷಿ ನುಡಿಯಲು ಯಾವುದೇ ಲಿಖಿತ ಪತ್ರ ಬರೆದುಕೊಟ್ಟಿಲ್ಲ, ಮೌಖಿಕವಾಗಿ ಹೇಳಿರುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತರ ಪಕ್ಷಕಾರರ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಭೂಸ್ವಾಧೀನಕ್ಕಿಂತ ಮೊದಲು ಭೂಸ್ವಾಧೀನಾಧಿಕಾರಿಗಳು ನಮಗೆ ನೋಟಿಸ ನೀಡಿದ್ದರು ಎಂದರೆ ಸರಿ. ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನಿಗಮದವರು ಜಂಟಿ ಮೋಜಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಜಂಟಿ ಮೋಜಣಿ ಮಾಡಿದರೂ ಸಹ ಮಾಡಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೊಡುವ ಮುಂಚೆ ನಮ್ಮ ಜಮೀನಿನ ಸ್ವರೂಪ , ಫಲವತ್ತತೆ, ನೀರಾವರಿ ಬಗ್ಗೆ ಮತ್ತು ಬೆಳೆಯುವ ಬೆಳೆಗಳ ಬಗ್ಗೆ ಪರಿಶೀಲನೆ ಮಾಡಿ ನೀಡಿದ ಪರಿಹಾರ ಯೋಗ್ಯವಾಗಿದೆ ಎಂದರೆ ಸರಿಯಲ್ಲ.

ನಮಗೆ ಅವಾರ್ಡ ನೋಟಿಸ ನೀಡಿದ್ದರು ಎಂದರೆ ಸರಿ. ಈಗಾಗಲೇ ನೀಡಿದ ಪರಿಹಾರ ಪಡೆದಿರುತ್ತೇನೆ ಎಂದರೆ ಸರಿ. ಅವಾರ್ಡನ 2 ತಿಂಗಳ ನಂತರ ನಾನು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ನಿಗದಿತ ಅವಧಿಯಲ್ಲಿ ನಾವು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನದಿಇಂಗಳಗಾಂವ ಗ್ರಾಮದಲ್ಲಿ 3-4 ಅಡಿಯಲ್ಲಿ ನೀರು ಬರುತ್ತದೆ ಎಂದರೆ ಸರಿಯಲ್ಲ. 20 ಅಡಿ ಅಗೆಯಬೇಕು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಥಣಿ ದೊಡ್ಡ ನಗರ ಎಂದರೆ ಸರಿ. ನಮ್ಮೂರಿನಿಂದ ಹಲ್ಯಾಳ ಗ್ರಾಮ 2 ಕಿಮೀ ಅಂತರದಲ್ಲಿರುತ್ತದೆ. ನಮ್ಮೂರಿನಿಂದ ಅಥಣಿ 15 ಕಿಮೀ ಅಂತರದಲ್ಲಿರುತ್ತದೆ. ಅಥಣಿಯಲ್ಲಿ ಮನೆ ಕಟ್ಟುವ ಸಾಮಗ್ರಿಗಳು ಲಭ್ಯವಿರುತ್ತವೆ ಎಂದರೆ ನಾವು ಕಟ್ಟುವ ಸಮಯದಲ್ಲಿ ಲಭ್ಯವಿರಲಿಲ್ಲ ಎಂದು ನುಡಿಯುತ್ತಾರೆ. ನಾವು ಮನೆ ಕಟ್ಟುವ ಸಮಯದಲ್ಲಿ ಅಥಣಿ ತಾಲೂಕು ಇತ್ತು ಎಂದರೆ ಸರಿ. ಆದರೆ ಅಭಿವೃದ್ಧಿಯಾಗಿರಲಿಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮೂರಿನಿಂದ ಮಾಂಜರಿ ಗ್ರಾಮ 30 ಕಿಮೀ ದೂರದಲ್ಲಿರುತ್ತದೆ. ನಮ್ಮೂರಿನಿಂದ ಮಾಂಜರಿ ಗ್ರಾಮ ಕೇವಲ 15 ಕಿಮೀ ದೂರದಲ್ಲಿರುತ್ತದೆ ಆದರೂ 30 ಕಿಮೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಮ್ಮೂರಿನಿಂದ ಅಳ್ನಾವರ 70-80 ಕಿಮೀ ದೂರದಲ್ಲಿರುತ್ತದೆ. ನಮ್ಮ ಮನೆ ಕಟ್ಟಲು ಅಳ್ನಾವರ, ದಾಂಡೇಲಿ, ಸಾಂಗ್ಲಿ, ಮಾಂಜರಿ ಮತ್ತು ಜಮಖಂಡಿ ಊರುಗಳಿಂದ ಕಟ್ಟಡ ಸಾಮಗ್ರಿಗಳನ್ನು ಖರೀದಿ ಮಾಡಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮೂರಿನಿಂದ ದಾಂಡೇಲಿ 70 ಕಿಮೀ ದೂರದಲ್ಲಿರುತ್ತದೆ. ಮುಳುಗಡೆಯಾದ ಊರನ್ನು ಸ್ಥಳಾಂತರಿಸಲಾಗಿದೆ ಎಂದರೆ ಸರಿಯಲ್ಲ. ಮಳೆಗಾಲದಲ್ಲಿ ಮಾತ್ರ 15 ದಿನಗಳ ಕಾಲ ಊರನ್ನು ಬಿಟ್ಟು ನಂತರ ಅಲ್ಲಿಯೇ ವಾಸವಿರುತ್ತೇವೆ. ನಮ್ಮ ಮನೆಗಳು ಬಿದ್ದಿರುವುದಿಲ್ಲ. ನಮ್ಮ ಮನೆಯನ್ನು ಕಟ್ಟಿಸಿ 30-35 ವರ್ಷಗಳಾಯಿತು. ನಮ್ಮ ಮನೆಯನ್ನು ಕಟ್ಟಿಸಿ 15-20 ವರ್ಷವಾಗಿದೆ ಎಂದರೆ ಸರಿಯಲ್ಲ. ಮನೆ ಹಳೆಯದಾದರೆ ಅದರ ಮೌಲ್ಯವೂ ಸಹ ಕಡಿಮೆಯಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಮೌಲ್ಯವನ್ನು ತೋರಿಸಲು Price List ನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಖಾಸಗಿ ಇಂಜನಿಯರವರಿಂದ ನಮ್ಮ ಮನೆಯ ಮೌಲ್ಯಮಾಪನವನ್ನು ಮಾಡಿಸಿರುತ್ತೇವೆ. ಸದರಿ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸ್ವಾಧೀಪಡಿಸಿಕೊಳ್ಳುವಾಗ ಇರುವ ಬೆಲೆಗಿಂತ ಹೆಚ್ಚಿನ ಬೆಲೆ ನಿಗದಿಪಡಿಸಿ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ನೀಡಿದ ಪರಿಹಾರ ಸೂಕ್ತ ಮತ್ತು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ಭೂಸ್ವಾಧೀನ ಅಧಿಕಾರಿಗಳಿಂದ ನಿಗದಿ ಪಡಿಸಿದ ಪರಿಹಾರ ಹಣವನ್ನು ಪಡೆದುಕೊಂಡು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಕುಡವಕ್ಕಲಿಗೇರ ಎಂ ಜಿ)
1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ
ನ್ಯಾಯಾಧೀಶರು, ಬೆಳಗಾವಿ.